ಎರಡನೆಯದಾಗಿ ನನ್ನ ಕ್ಷೇತ್ರದಲ್ಲಿ ಒಟ್ಟು 80 ಕಿಲೋ ಮೀಟರ್ ರೋಡ್ ಆಗಬೇಕಾಗಿದೆ ಈ ರಸ್ತೆಗಳ ಮೇಲೆ ಅನೇಕ ಮಹಿಳೆಯರು, ಡೆಲಿವರಿ ಕೇಸಿಗಾಗಿ ಭಾಲ್ಕಿ, ಬಸವಕಲ್ಯಾಣ–ಹುಮ್ನಾಬಾದ್, ಗ್ರಾಮದಿಂದ ಬಸ್‌ನಲ್ಲಿ ಹೋಗಬೇಕಾಗಿದೆ ತಗ್ಗು ಮತ್ತು ಗುಂಡಿ ಇರತಕ್ಕ ಜಾಗಗಳಲ್ಲೂ ಬಸ್ ಜಂಪ್ ಆಗಿ ಹೋಗುವಂತಹ ಸಮಯದಲ್ಲಿ ಎಷ್ಟೋ ಹೆರಿಗೆಗೆ ಹೋಗತಕ್ಕ ಮಹಿಳೆಯರಿಗೆ ಬಿಪಿ ಹೈಯೆಸ್ಟ್ ಆಗಿ ಸತ್ತಿರುವಂತಹ ಉದಾಹರಣೆಗಳು ಇದ್ದಾವೆ ಜೊತೆಗೆ ನನ್ನ ಕ್ಷೇತ್ರದಲ್ಲಿ ಮಾನ್ಯ ಸಚಿವರು ಯಾವಾಗಲಾದರೂ ಪ್ರವಾಸ ಮಾಡಿದಂತಹ ಸಂದರ್ಭದೊಳಗೆ ಅನೇಕ ಸಾರಿ ಮಂತ್ರಿಗಳು ಸೊಂಟ ನೋವಿನಿಂದ ಪ್ರವಾಸಗಳನ್ನು ರದ್ದು ಮಾಡಿಕೊಂಡು ವಾಪಸ್ ಒಂದಂತಹ ಉದಾಹರಣೆ ಇದ್ದಾವೆ ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುವುದು ಏನೆಂದರೆ ಇವು ಅಂತರ ರಾಜ್ಯದ ರಸ್ತೆ ಆಗಿವೆ ಮಾವಿನಾಡಿ ಕ್ರಾಸ್‌ನಿಂದ ಹೊರವಟ್ಟಿ ಗ್ರಾಮದವರೆಗೆ ಅಂತರ ರಾಜ್ಯ ರಸ್ತೆ ಹೊರವಟ್ಟಿ ಅಂದರೆ ನಮ್ಮ ಮಾನ್ಯ ಖರ್ಗೆ ಸಾಹೇಬರು ಹುಟ್ಟಿದಂತಹ ಊರು ಆ ಗ್ರಾಮಕ್ಕೆ ಇಲ್ಲಿಯವರೆಗೆ ರೋಡ್ ಆಗಿಲ್ಲ ಜೊತೆಯಲ್ಲಿ ಮಾಣಿಕ್ ನಗರದಿಂದ ಖೋಡವಾಡಿವರೆಗೆ, ಹಳ್ಳಿಕೇಡ್ (ಬಿ) ಗ್ರಾಮದಿಂದ ಧೂಳುಗುಂಡಿ ಕ್ರಾಸ್‌ವರೆಗೆ, ಕೇಸಿಪ್ ಜೋಳದ ಕ್ರಾಸ್‌ನಿಂದ ಒಳಹಂಡಿ ಗ್ರಾಮದವರೆಗೆ, ಮಹಾರಾಷ್ಟ್ರದ ಗಡಿ ಭಾಗಕ್ಕೆ, ಒಟ್ಟು 80 ಕಿಲೋ ಮೀಟರ ರಸ್ತೆ ಆಗುವುದು ಬಾಕಿ ಉಳಿದಿದೆ ದಯವಿಟ್ಟು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಆ ಹುಲಸೂರು ಕ್ಷೇತ್ರ ಅತೀ ಹಿಂದುಳಿದಿರತಕ್ಕಂಥ ಪ್ರದೇಶ ಗಡಿ ಭಾಗದಲ್ಲಿ ಇರತಕ್ಕದ್ದು ಈ ಸರ್ಕಾರ ಬಂದು ಮೂರು ತಿಂಗಳಾಯಿತು ಇನ್ನು ಯಾವುದೇ ರಸ್ತೆ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಮಾನ್ಯ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ದಯವಿಟ್ಟು 80 ಕಿಲೋ ಮೀಟರ್ ರಸ್ತೆ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು ಮತ್ತು ಹಣ ಮಂಜೂರು ಮಾಡಬೇಕೆಂದು ಕೇಳುತ್ತಿದ್ದೇನೆ

ಶ್ರೀ ಹೆಚ್ ಡಿ ರೇವಣ್ಣ (ಇಂಧನ ಮತ್ತು ಲೋಕೋಪಯೋಗಿ ಸಚಿವರು) ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರಲ್ಲಿ ಯಾವ ರಸ್ತೆ ಅತಿ ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಪಡುತ್ತೇನೆ ಅದರ ಜೊತೆಗೆ ಈಗಾಗಲೇ ರಾಜ್ಯವಲ್ಲಿ ಬರುವಂತಹ ಕೆಲವು ಎಂಡಿಆರ್ ರಸ್ತೆಗಳು ಇರಬಹುದು ಅಥವಾ ರಾಜ್ಯ ಹೆದ್ದಾರಿ ರಸ್ತೆ ಇರಬಹುದು ಈಗಾಗಲೇ ಗುಂಡಿ ಮುಚ್ಚುವಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ ಅದಕ್ಕೆ ಹಣವನ್ನೂ ಬಿಡುಗಡೆ ಮಾಡಿದ್ದೇವೆ

ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸಂಚರಿಸುವ ಬಸ್ಸುಗಳ ನಿಲುಗಡೆ

109 (476) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಬಸ್ ನಿಲ್ದಾಣಕ್ಕೆ ಬಾರದೇ ಹೋಗುತ್ತಿರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು,

ಆ) ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸಂಚರಿಸುವ ಎಲ್ಲಾ ಕೆ ಎಸ್ ಆರ್ ಟಿ ಸಿ ಬಸ್ಸುಗಳನ್ನು ಬ್ರಹ್ಮಾವರದಲ್ಲಿ ನಿಲುಗಡೆಗೊಳಿಸುವಂತೆ ಆದೇಶ ಮಾಡಲಾಗುವುದೇ,

ಇ) ಉಡುಪಿ ಮತ್ತು ಕುಂದಾಪುರದ ನಡುವೆ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ನಿಲ್ದಾಣಗಳಿಗೆ ಬಂದು ಪ್ರಯಾಣಿಕರನ್ನು ಹತ್ತಿಸಿಕೊಂಡು / ಇಳಿಸಿ ಸಂಚಾರ ನಿಯಂತ್ರಕರ ಸಹಿಯನ್ನು ಪಡೆದುಕೊಂಡು ಆಚರಣೆಗೊಳ್ಳುವಂತೆ ಅವಶ್ಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ

ಆ) ದೂರ ಮಾರ್ಗದ ಆಚರಣೆಯನ್ನು ಹೊರತುಪಡಿಸಿ, ಹತ್ತಿರ ಮಾರ್ಗಗಳಲ್ಲಿ ಸಂಚರಿಸುವ ಬಸ್ಸುಗಳಿಗೆ ನಿಲುಗಡೆ ಕಲ್ಪಿಸಲಾಗಿದೆ.

ಇ) ಅವಶ್ಯಕತೆಯನ್ನು ಅನುಸರಿಸಿ ಕ್ರಮ ವಹಿಸಲಾಗುವುದು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರಿ ಬಸ್ಸುಗಳು ಎಲ್ಲಾ ಬಸ್ ಸ್ಟ್ಯಾಂಡ್‌ಗಳಿಗೆ ಹೋಗುತ್ತಿವೆ ಎಂದು ಹೇಳಿದಿರಿ ಈಗ ಬ್ರಹ್ಮಾವರ ಬಸ್ ಸ್ಟ್ಯಾಂಡಿಗೆ ಬಸ್ ಬರುತ್ತಿಲ್ಲ ಅದಕ್ಕೇ ಪ್ರಶ್ನೆಯನ್ನು ಕೇಳಿರುವುದು ತಾವು ಅವಶ್ಯಕತೆ ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ ಕೊನೆಯ ಪಕ್ಷ ನೈಟ್ ಬಸ್‌ಗಳು, ಸಾಲಿಗ್ರಾಮದಿಂದ, ಕುಂದಾಪುರದಿಂದ ಹೋಗುವಂತಹ ಬಸ್‌ಗಳಾದರೂ ಬ್ರಹ್ಮಾವರ ಬಸ್ ಸ್ಟ್ಯಾಂಡಿನಲ್ಲಿ ನಿಂತು ಹೋಗುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಏಕೆಂದರೆ ಅದು ಈಗ ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆಗಿದೆ ಅದರೊಟ್ಟಿಗೆ ಇನ್ನೊಂದು ಪ್ರಶ್ನೆ, ಸ್ವಲ್ಪ ಈ ಪ್ರಶ್ನೆಗೆ ಹೊರತಾಗಿ ಕೇಳುತ್ತಿದ್ದೇನೆ ಈಗ ಮೆಜಸ್ಟೀರಿಯಲ್ ಆರ್ಡರ್ ಇದೆ ಪ್ರೈವೇಟ್ ಬಸಸ್‌ಗೆ ಟೈಮಿಂಗ್ಸ್ ಜಾಸ್ತಿ ಕೊಡಬಾರದು ಎನ್ನುವಂತಹದು ಇದೆ ಪುನಃ ಅದನ್ನು ತೆಗೆದು ಹೆಚ್ಚು ಬಸ್‌ಗಳಿಗೆ ಅವಕಾಶ ಕೊಡುತ್ತಾರೆಂದು ಹೇಳಿ ಅದನ್ನು ಮಾಡಬಾರದು ಏಕೆಂದರೆ ಈಗಾಗಲೇ ಒತ್ತಡ ಜಾಸ್ತಿ ಆಗಿದೆ ಈ ಮೆಜಿಸ್ಟೀರಿಯಲ್ ಆರ್ಡರ್ ವಿತ್‌ಡ್ರಾ ಮಾಡಿದರೆ ಮತ್ತೆ ಬಸ್‌ಗಳ ಕಾಂಪಿಟಿಷನ್ ಜಾಸ್ತಿ ಆಗಿ ಅಪಘಾತಗಳು ಜಾಸ್ತಿ ಆಗುತ್ತದೆ ಅದಕ್ಕೋಸ್ಕರ ಮಾನ್ಯ ಸಚಿವರು ದಯವಿಟ್ಟು ಜಿಲ್ಲಾಧಿಕಾರಿಯವರಿಗೆ ಅಥವಾ ಆರ್‌ಟಿಓ ಅಧಿಕಾರಿಗಾದರೂ ಹೇಳಿ ಇದನ್ನು ಸದ್ಯಕ್ಕೆ ತಡೆ ಹಿಡಿಯಲು ತಾವು ಆದೇಶ ಮಾಡಬೇಕು ಎಂದು ಹೇಳುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೆ, ಇದರಲ್ಲಿ ತಮಗೆ ಗೊತ್ತಿದ್ದ ಹಾಗೆ ದೂರ ಪ್ರಯಾಣ ಮಾಡತಕ್ಕಂಥ ಬಸಸ್ ನೇರವಾಗಿ ಹೋಗುತ್ತವೆ ಆದರೆ ಸಮೀಪದಲ್ಲಿರತಕ್ಕ ಉಡುಪಿ ಆಗಲಿ, ಕುಂದಾಪುರ ಆಗಲಿ, ಈ ಬಸಸನ್ನು ಹೆಚ್ಚು ಕಡಿಮೆ ಯಾವ ಪ್ಯಾಸೆಂಜರ್ ಟೈಪ್, ಅಲ್ಲಿಂದ ಹೋಗತಕ್ಕದ್ದು ಆಗುತ್ತದೆ ಆದರೆ ತಾವು ಪ್ರತಿ ಒಂದು ಬಸ್ ಅದೇ ಮಾರ್ಗದಲ್ಲಿ ಹೋಗಬೇಕು ಎಂದರೆ ಆವಾಗ ಏನಾಗುತ್ತದೆ ನ್ಯಾಚುರಲಿ ಲಾಂಗ್ ಡಿಸ್ಟೆನ್ಸ್‌ಗೆ ಹೋಗುವವರು ಆಬ್ಜೆಕ್ಟ್ ಮಾಡುತ್ತಾರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಬರೇ ನೈಟ್ ಬಸಸ್‌ಗೆ ಮಾಡಬಹುದು

ಶ್ರೀ ಮಲ್ಲಿಕಾರ್ಜುನ ಖರ್ಗೆ ನೈಟ್ ಬಸಸ್ ಸಹ ಬೊಂಬಾಯಿಗೆ ಹೋಗತಕ್ಕಂಧವು, ಅದವಾ ಬೇರೆ ಕಡೆ ಹೋಗತಕ್ಕಂಧವು ಇರುತ್ತವೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಸಾಲಿಗ್ರಾಮದಿಂದ ಹೋಗತಕ್ಕದ್ದನ್ನು ಬ್ರಹ್ಮಾವರ ಬಸ್ ಸ್ಟ್ಯಾಂಡಿಗೆ ಹೋಗುವ ವ್ಯವಸ್ಥೆ ಮಾಡಬಹುದು

ಶ್ರೀ ಮಲ್ಲಿಕಾರ್ಜುನ ಖರ್ಗೆ ಸಂಬಂಧಪಟ್ಟಂತಹ ಅಧಿಕಾರಿಗೆ ಈ ಬಗ್ಗೆ ಖಂಡಿತ ಹೇಳುತ್ತೇನೆ.

ನೀರಾವರಿ ಹಾಗೂ ಲೋಕೋಪಯೋಗಿ ಇಲಾಖೆಗಳ ವಿಲೀನ

110 (747) ಶ್ರೀ ರೇವು ನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದ ಆದೇಸ ಸಂಖ್ಯೆ. ಜಸಂಇ 33 ಸೇಸಕಿ 2001, ಬೆಂಗಳೂರು, ದಿನಾಂಕ 14–11–2003ರಲ್ಲಿ (ಕರ್ನಾಟಕ ರಾಜ್ಯ ಪತ್ರ ದಿನಾಂಕ 01–01–2004 ಭಾಗ–3) ಪ್ರಕಟಿಸಿರುವಂತೆ ನೀರಾವರಿ ಇಲಾಖೆಯನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಲಾಗಿರುವುದು ನಿಜವೇ,

ಆ) ಬೇರ್ಪಟ್ಟಿರುವ ಈ ಎರಡೂ ಇಲಾಖೆಗಳನ್ನು ಪುನಃ ಒಂದುಗೂಡಿಸಿ ವಿಲೀನಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ,

ಇ) ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ನೀರಾವರಿ ಇಲಾಖೆಯನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಿರುವುದಿಲ್ಲ ಆದರೆ ಸರ್ಕಾರದ ಆದೇಶ ಸಂಖ್ಯೆ. ಪಿಡಬ್ಲ್ಯೂಡಿ 18 ಪಿಸಿಒ 86, ಬೆಂಗಳೂರು ದಿನಾಂಕ 20–10–86ರಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳನ್ನು ಎರಡು ಪ್ರತ್ಯೇಕ ಇಲಾಖೆಗಳೆಂದು ಬೇರ್ಪಡಿಸಲಾಗಿದೆ ಇದರನ್ವಯ ಸರ್ಕಾರದ ಆದೇಶ ಸಂಖ್ಯೆ ಜಸಂಇ 33 ಸೇಸಕಿ 2001, ಬೆಂಗಳೂರು, ದಿನಾಂಕ 14–11–2003ರಲ್ಲಿ ನೀರಾವರಿ ಇಲಾಖೆಗೆ ಖಾಯಂ ಆಗಿ ವರ್ಗಾಯಿಸಿ, ನೇಮಕಗೊಂಡ ಸಹಾಯಕ ಇಂಜಿನಿಯರ್‌ಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ

ಆ) ಸರ್ಕಾರದ ಮುಂದೆ ಇಂಥ ಪ್ರಸ್ತಾವನೆ ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ರೇವುನಾಯಕ್ ಬೆಳಮಗಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ನಾನು ಕೇಳಿದ್ದು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಜಸಂಇ–33–ನೇಸಕಿ–2001, ಬೆಂಗಳೂರು ದಿನಾಂಕ 14–11–2003ರಲ್ಲಿ (ಕರ್ನಾಟಕ ರಾಜ್ಯ ಪತ್ರ ದಿನಾಂಕ 1–01–2004, ಭಾಗ–3) ಪ್ರಕಟಿಸಿದಂತೆ ನೀರಾವರಿ ಇಲಾಖೆಯನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಲಾಗಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದೆ ಅವರು ಉತ್ತರ ಕೊಟ್ಟಿದ್ದಾರೆ ನೀರಾವರಿ ಇಲಾಖೆಯಿನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಿರುವುದಿಲ್ಲ